# ಜನಪದ ಸಾಹಿತ್ಯ: ಆಧುನಿಕ ತಲ್ಲಣಗಳು

ಶಂಭನಗೌಡ ನೀರಲಗಿ

ಕನ್ನಡ ಸಹಾಯಕ ಪ್ರಾಧ್ಯಾಪಕರು, ಕೆ.ಎಲ್.ಇ. ಸಂಸ್ಥೆಯ ಗುದ್ಲೆಪ್ಪ ಹಳ್ಳಿಕೇರಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಹಾವೇರಿ.

DOI: https://doi.org/10.5281/zenodo.17254960

## ABSTRACT:

ಈ ಲೇಖನದಲ್ಲಿ ಜನಪದ ಸಾಹಿತ್ಯ: ಆಧುನಿಕ ತಲ್ಲಣಗಳು ಎಂಬ ವಿಷಯವನ್ನು ಚರ್ಚಿಸಲಾಗಿದೆ. ಕನ್ನಡ ಸಾಹಿತ್ಯದಲ್ಲಿ ಜನಪದ ಸಾಹಿತ್ಯವು ಬೇರುಗಳಂತಿದೆ. ಜನಪದ ಗೀತೆ, ಕಥೆ, ನೃತ್ಯ, ಕಲೆ, ಆಚರಣೆ, ಸಂಪ್ರದಾಯಗಳ ಮೂಲಕ ಜನರ ಬದುಕು, ನಂಬಿಕೆ, ಸಂಸ್ಕೃತಿ ಹಾಗೂ ಜೀವನ ಮೌಲ್ಯಗಳು ವ್ಯಕ್ತವಾಗುತ್ತವೆ. ಆದರೆ, ಆಧುನಿಕ ಯುಗದಲ್ಲಿ ತಂತ್ರಜ್ಞಾನ, ಜಾಗತೀಕರಣ, ಆರ್ಥಿಕ ಬದಲಾವಣೆಗಳು ಹಾಗೂ ಸಮಾಜದ ಜೀವನಶೈಲಿಗಳ ಬದಲಾವಣೆಗಳಿಂದ ಜನಪದ ಕಲೆಆಚರಣೆಗಳು ನಿಧಾನವಾಗಿ ನಶಿಸುತ್ತಿರುವುದನ್ನು ಗಮನಿಸಬಹುದು. ಹಿಂದೆ ಜನರ ಬದುಕಿನ ಅಂಗವಾಗಿದ್ದ ಗೀತೆ, ಗಾದೆ, ಬಯಲಾಟ, ಜಾತ್ರಾಹಬ್ಬಗಳು ಈಗ ವೇದಿಕೆಮಟ್ಟದ ಪ್ರದರ್ಶನಗಳಾಗಿ ಬದಲಾಗುತ್ತಿವೆ. ಪಾರಂಪರಿಕ ಜ್ಞಾನವನ್ನು ಮಾರುಕಟ್ಟೆಗೊಳಿಸುವ ಪ್ರಕ್ರಿಯೆಯೂ ಹೆಚ್ಚಾಗಿದೆ. ಇಂತಹ ಸ್ಥಿತಿಯಲ್ಲಿ ಜನಪದ ಕಲೆಸಾಹಿತ್ಯವನ್ನು ಉಳಿಸಿ ಬೆಳೆಸುವುದು ಅವಶ್ಯಕ. ನವಮಾಧ್ಯಮ ಹಾಗೂ ತಂತ್ರಜ್ಞಾನಗಳನ್ನು ಬಳಸಿಕೊಂಡು ಜನಪದ ಪರಂಪರೆಯನ್ನು ಆಧುನಿಕ ಜೀವನದೊಂದಿಗೆ ಹೆಜ್ಜೆ ಹಾಕುವ ಪ್ರಯತ್ನವೇ ಇಂದಿನ ಅಗತ್ಯ. ಹೀಗಾಗಿ, ಜನಪದದ ಜೀವಂತಿಕೆ ಕೇವಲ ಸಂಗ್ರಹದಲ್ಲಿ ಅಲ್ಲ, ಬದಲಾಗಿ ಅದರ ಅನುಷ್ಠಾನ, ಪ್ರಸಾರ ಹಾಗೂ ಹೊಸ ಪೀಳಿಗೆಗೆ ತಲುಪಿಸುವಿಕೆಯಲ್ಲಿ ಇದೆ ಎಂಬುದು ಲೇಖನದ ಸಾರವಾಗಿದೆ.

## KEYWORDS:

ಜನಪದ ಸಾಹಿತ್ಯ, ಕಲೆ, ಸಂಪ್ರದಾಯ, ಆಧುನಿಕತೆ, ಪಾರಂಪರಿಕ ಜ್ಞಾನ, ಸಂಸ್ಕೃತಿ, ಜಾಗತೀಕರಣ.

ಕನ್ನಡ ಸಾಹಿತ್ಯದಲ್ಲಿ ಜನಪದ ಸಾಹಿತ್ಯಕ್ಕೆ ಬಹುಮುಖ್ಯವಾದ ಸ್ಥಾನವಿದೆ. ಏಕೆಂದರೆ 'ಜನವಾಣಿ ಬೇರು, ಕವಿವಾಣಿ ಹೂ' ಎಂಬ ಮಾತು ಕನ್ನಡ ಸಾಹಿತ್ಯದ ಮೂಲ ಬೇರಿರುವುದು ಜನಪದ ಸಾಹಿತ್ಯದಲ್ಲಿಯೇ ಎಂಬುದು ಸ್ಪಷ್ಟವಾದ ಮಾತು. ಸಾಹಿತ್ಯದ ಕುರುಹು ಮೌಖಿಕ ಪರಂಪರೆಯ ನೆಲೆಯಲ್ಲಿ ಕಂಡುಬರುವ, ತಲೆತಲಾಂತರದಿಂದ ನಡೆದುಕೊಂಡು ಬಂದಿರುವ ಏಕೈಕ ಪರಂಪರೆಯೇ ಜನಪದ ಸಾಹಿತ್ಯ. ಈ ನಿಟ್ಟಿನಲ್ಲಿ ಜನಪದ ಕಲಾವಿದರು, ಜನಪದ ಕಲೆಗಳಿಗೆ ಯಾವುದೇ ಕೊರತೆಯಿಲ್ಲ. ಜನಪದರು ತಮ್ಮ ನೋವುನಲಿವುಗಳಿಗೆ, ಮನರಂಜನೆಯಂತಹ ಜನಪದ ಪ್ರಕಾರಗಳಿಗೆ ಮಾರು ಹೋಗಿದ್ದಾರೆ. ತಮ್ಮ ಸುಗ್ಗಿಯ ಆಯಾಸ ನಿವಾರಣೆಗಾಗಿ, ಊರಿನ ಹಬ್ಬಹರಿದಿನಗಳಲ್ಲಿ, ಜಾತ್ರೆಗಳಲ್ಲಿ ಹಲವಾರು ಕಲಾ ಪ್ರದರ್ಶನಗಳನ್ನು ಪ್ರದರ್ಶಿಸುತ್ತಿದ್ದರು. ಹಾಸ್ಯ ಚಟಾಕಿಗಳನ್ನು ಹಾರಿಸುವ ಮೂಲಕ ಜನರನ್ನು ಮನರಂಜಿಸುತ್ತಿದ್ದರು. ಉತ್ತರ ಕರ್ನಾಟಕವು ಹಲವಾರು ಜನಪದ ಕಲಾ ಪ್ರಕಾರಗಳ ಹುಟ್ಟಿಗೆ ಕಾರಣವಾಗಿದೆ. ಅಖಂಡವಾದ ಜಾನಪದವನ್ನು ಒಂದು ವೃಕ್ಷಕ್ಕೆ ಹೋಲಿಸಿದರೆ ಆ ವೃಕ್ಷದಲ್ಲಿನ ಒಂದೊಂದು ಟೊಂಗೆಗಳನ್ನು ಜನಪದದ ಒಂದೊಂದು ಪ್ರಕಾರಗಳನ್ನಾಗಿ ವರ್ಗೀಕರಿಸಬಹುದು. ಜನಪದ ಕಲೆ, ಜನಪದ ನೃತ್ಯ, ಜನಪದ ನಂಬಿಕೆ, ಜನಪದ ಸಂಪ್ರದಾಯ, ಜನಪದ ಪರಂಪರೆ, ಜನಪದ ವೈದ್ಯ ಮತ್ತು ಜನಪದ ಸಾಹಿತ್ಯ ಎಂಬ ಉಪಟೊಂಗೆಗಳನ್ನಾಗಿ ವರ್ಗೀಕರಿಸಬಹುದು. ಜನಪದ ಸಾಹಿತ್ಯದಲ್ಲಿಯೇ ಪದ್ಯ ಮತ್ತು ಗದ್ಯಗಳೆಂದು ಮಾಡಿಕೊಂಡು, ಪದ್ಯ ಸಾಹಿತ್ಯದಲ್ಲಿ ಬಿಡಿಗೀತೆ, ಶಿಶುಗೀತೆ, ಕಥನಗೀತೆ, ಡೊಳ್ಳಿನ ಹಾಡು ಮತ್ತು ಲಾವಣಿಗಳೆಂದು ಬರುತ್ತವೆ. ಅದೇ ರೀತಿ ಗದ್ಯ ಸಾಹಿತ್ಯದಲ್ಲಿ ಐತಿಹ್ಯ, ಪುರಾಣಗಳು, ನಾಟಕ, ಬಯಲಾಟ, ದೊಡ್ಡಾಟ, ಯಕ್ಷಗಾನ, ಜನಪದ ಕಥೆ, ಗಾದೆ, ಒಗಟು, ಒಡಪು, ಒಡಬು ಎಂಬ ಪ್ರಕಾರಗಳನ್ನು ಮಾಡಿಕೊಳ್ಳಬಹುದು.

ಜಾನಪದ ಒಂದು ವಿಶಾಲವಾದ ಕ್ಷೇತ್ರ. ಪ್ರಪಂಚದಲ್ಲಿ ವಿಜ್ಞಾನ ಮತ್ತು ಸಾಮಾಜಿಕ ವಿಷಯಗಳಷ್ಟೇ ಮಹತ್ವ ಜಾನಪದಕ್ಕೂ ದೊರೆಯುತ್ತಿದೆ. ಒಂದು ಸಮುದಾಯದ ಪದ್ಧತಿ, ಸಂಸ್ಕಾರ, ಆಚಾರವಿಚಾರ, ಸಂಸ್ಕೃತಿಯನ್ನು ತಿಳಿಯಬೇಕಾದರೆ ಆ ಸಮುದಾಯದಲ್ಲಿ ಇರುವ ಜಾನಪದವನ್ನು ಅಧ್ಯಯನ ಮಾಡುವುದು ಅತಿ ಮುಖ್ಯವಾಗುತ್ತದೆ. ಜನಪದವನ್ನು ಕುರಿತ ವಿಜ್ಞಾನವೇ ಜಾನಪದವೆಂದು ಸ್ವೀಕೃತವಾದಾಗ, ಜನಪದ ಕಲೆ, ಜನಪದ ನೃತ್ಯ, ಜನಪದ ನಂಬಿಕೆ, ಜನಪದ ಸಂಪ್ರದಾಯ, ಜನಪದ ಪರಂಪರೆ, ಜನಪದ ವೈದ್ಯ ಇತ್ಯಾದಿಗಳು ಜಾನಪದದ ಅಂಗಗಳಾಗಿರುವಂತೆ ಜನಪದ ಸಾಹಿತ್ಯವು ಅದರ ಅತ್ಯಂತ ಪ್ರಮುಖ ಅಂಗ. ಇದರ ವೈಶಾಲ್ಯತೆ ಹೆಚ್ಚು. ಅದರಲ್ಲಿ ಜನಪದರ ಸರ್ವ ಕ್ಷೇತ್ರದ ಪರಿಚಯವಿರುತ್ತದೆ.

ಜನಪದ ಸಾಹಿತ್ಯವೆಂದರೆ ಜನಸಾಮಾನ್ಯರ ಬದುಕು, ಜೀವನ ವಿಶೇಷವೆಂದು

ಹೇಳಬಹುದು. ಆಡು ಮುಟ್ಟದ ಗಿಡವಿಲ್ಲ, ಜಾನಪದ ಒಳಗೊಳ್ಳದ ವಸ್ತುವಿಲ್ಲ. ಮಾನವನ ಹುಟ್ಟಿನಿಂದ ಸಾಯುವತನಕ, ಆಕಾಶದಿಂದ ಭೂಮಿಯವರೆಗೆ ಹೀಗೆ ಸರ್ವ ವಿಷಯಗಳು ಅದರಲ್ಲಿ ಅಡಗಿವೆ. ಈ ಎಲ್ಲ ವಿಷಯಗಳು ಅವರ ಆಡು ಭಾಷೆಯ ಮೂಲಕ ತಮಗೆತಮಗೆ ತಿಳಿದ ರೀತಿಯಲ್ಲಿ ಹಾಡು ಕಟ್ಟಿ, ಕಥೆ ಹೇಳಿ, ಒಗಟು ಒಡ್ಡಿ ಮತ್ತು ಸಾರುವ ಗಾದೆಗಳಾಗಿ ಹೊರ ಹೊಮ್ಮಿರುತ್ತವೆ. ಅವು ಶಾಸ್ತ್ರಗಳಾಗಿರಲಿಕ್ಕಿಲ್ಲ, ಆದರೆ ಜನಸಾಮಾನ್ಯರ ಸಿದ್ಧಾಂತಗಳಾಗಿರುತ್ತವೆ. ಅವರ ಸಂಪ್ರದಾಯ, ನಂಬಿಕೆ, ದೈವದೇವರು, ಸುಖದುಃಖ, ಪಾಪಪುಣ್ಯ, ಸಂಗೀತ, ನೃತ್ಯಕಲೆಗಳು ಹಾಗೂ ಸಂಸ್ಕೃತಿಯ ಗುಣಮಟ್ಟಗಳನ್ನು ಗುರುತಿಸಬಹುದು.

ಗೆಡ್ಡೆಗೆಣಸು ತಿನ್ನುವಾಗ ಮನುಷ್ಯ ಸುಖವಾಗಿದ್ದ. ಯಾವಾಗ ಚಿನ್ನ ಬಗೆಯಲು ಪ್ರಾರಂಭಿಸಿದಾಗ ಬಡವನಾಗುತ್ತಾ ಹೋದ ಎಂಬುದು ಪ್ರಕೃತಿಯೊಳಗಿನ ಬದುಕು ಹಾಗೂ ಆಧುನಿಕ ಬದುಕುಗಳ ಅಂತರ. ಆಧುನಿಕತೆ ಕೇಳುತ್ತಾ ಬರುವುದಿಲ್ಲ, ಪ್ರವಾಹದಂತೆ ಹರಿದು ಬರುತ್ತದೆ. ಅಂದು ರಾಗಿಕಲ್ಲು ಒಂದು ಆಧುನಿಕ ಮಾದರಿ ಯಂತ್ರ. ಇಂದು ಫ್ಲೋರ್‌ಮಿಲ್ ಕೂಡ ನಿಂತು ಹೋಗುತ್ತಿವೆ. ಕಂಪನಿ ಹಿಟ್ಟು ರಾಜ್ಯವಾಳುತ್ತಿದೆ. ಹಲ್ಲಿಗೆ ಚುಚ್ಚುವ ಕಡ್ಡಿ ಕೂಡ ಒಂದು ಯಂತ್ರ. ನಾಗರಿಕತೆ ಹಾಗೂ ಆಧುನಿಕತೆಯ ಸವಾರಿ ಮೊಸಳೆ ಮೇಲಿನ ಸವಾರಿ ಎಂಬ ಅರಿವು ನಮಗಿರಬೇಕಾಗುತ್ತದೆ. ಸ್ವರಾಜ್ಯ ಬಂತು, ಪರಂಪರೆಯ ಜ್ಞಾನ ಹೋಯಿತು.

ಮಳೆಯು ಮುಗಿಲು ಸೇರಿದೆ. ಇದರೊಂದಿಗೆ ಪರಂಪರೆಯ ಜ್ಞಾನ ಪರದೇಶೀ ಮಾಲುಗಳಿಗೆ ಅಡವಾಗಿದೆ. ಅಂಟುವಾಳ, ಸೀಗೆ, ಹುಚ್ಚೆಳ್ಳು, ಇಂತಹವು ಇಲ್ಲವಾಗುತ್ತಿವೆ. ಹೊಲಗದ್ದೆಗಳಲ್ಲಿ ಕ್ರಿಮಿಕೀಟಗಳೇ ಪೈರುಗಳ ಮೇಲೆ ಇಲ್ಲದಂತೆ ಮಾಡುವ ಮಾನವನು ಹೊಟ್ಟೆ ಒಳಗೆ ವಿದೇಶಿ ರಸಾಯನಗಳನ್ನು ಅಡಗಿಸಿ ಅದನ್ನಿಳಿಸಲು ವಿದೇಶಿ ಕಂಪನಿ ರಾಸಾಯನಿಕಗಳು ಇಂದು ಮಾರುಕಟ್ಟೆಯಲ್ಲಿ ತಾನೇ ಭೂ ಬಿಟ್ಟಿರುವುದು ದುರಂತ. ಇದು ದುರಂತಗಳ ಕಾಲ. ದೇಶ ಪರಕೀಯತೆ, ದಾಸ್ಯತೆಗೊಳಗಾಗಿದೆ. ಒಂದು ಕೆ.ಜಿ. ಮರದ ತರಗು 35 ಕೆ.ಜಿ. ನೀರು ಹಿಡಿದಿಡುವುದೆಂಬ ಜ್ಞಾನ ಬರಿದಾಗಿದೆ. ಶೇ. 3 ರಷ್ಟಿದ್ದ ಇಂಗಾಲ ಕೇವಲ 0.03 ರಷ್ಟಕ್ಕಿಳಿದಿದೆ. ಉಪ್ಪು ತಾಗಿದರೆ ಜೀವ ಬಿಡುವ ಎರೆಹುಳು; ರಸಾಯನಿಕ ವಸ್ತು ತಾಗಿದರೆ ಜೀವವೈವಿಧ್ಯ ಉಳಿದೀತೆ! ಒಂದು ಹಿಡಿ ಮಣ್ಣಿನೊಳು ಕೋಟಿ ಜೀವಾಣುಗಳಿರುವುದಿಲ್ಲವೆ? ಆದರೆ ಇಂದಿನ ಆಧುನಿಕತೆಯಲ್ಲಿ ರೈತರು ಅತಿಯಾದ ರಸಾಯನಿಕ ಗೊಬ್ಬರ, ಕೀಟನಾಶಕಗಳಾದ ಪೋರೆಟ್ ಮತ್ತು ಫಾಸ್ಫರಸ್‌ಗಳನ್ನು ಬಳಸುವುದರಿಂದ ಭೂಮಿಯಲ್ಲಿನ ಮಣ್ಣಿನ ಫಲವತ್ತತೆ, ಜೀವಾಣುಗಳ ನಾಶ ದಿನೇ ದಿನೇ ಹೆಚ್ಚುತ್ತಿರುವುದು ರೈತನ ಕಿವಿಗೆ ಮುಟ್ಟಬೇಕಾಗಿದೆ.

ಕೃಷಿ ಜನಪದದಲ್ಲಿ ಸಹಜ ಕೃಷಿ ಕೈಬಿಟ್ಟ ರೈತ ನವಣೆ, ಕೊರ್ಲೆ, ಇಂತಹವುಗಳ

ಮೂಲಕ ಪುನಃ ಪರಂಪರೆಯ ಸಿಂಹಾವಲೋಕನ ಮಾಡಬೇಕು ಎಂದು ಅವರು ಪಾಠ ಹೇಳುತ್ತಾರೆ. ಹೌದು, ನಗರದವರು ಭಯ ಬಿದ್ದಿದ್ದಾರೆ, ಸಹಜ ಕೃಷಿ ಅಂಗಡಿಗಳಿಗೆ ಮುತ್ತಿಗೆ ಹಾಕುತ್ತಿದ್ದಾರೆ. ಇದು ಜಾನಪದವು ಹೇಗೆ ಆಧುನಿಕ ಬದುಕಿಗೆ ಅವಶ್ಯಕ ಎಂಬುದನ್ನು ತೋರಿಸುತ್ತದೆ. ಒಂದು ಬಿದಿರು ಹಿಂಡಲಿಗೆ ಬೆಂಕಿ ಬಿದ್ದರೆ ಅದು ಸಾಯುವಾಗ ತಕ್ಷಣ ಗರ್ಭತಾಳಿ ನಾಲ್ಕು ಬಿದರಕ್ಕಿ ಉದುರಿಸುವುದು ತಾಯ್ತನದ ನೈಸರ್ಗಿಕ ವಿಧಾನ. ಅದು ಮನುಷ್ಯನಲ್ಲೂ ಇರುತ್ತದೆ, ನಿಜ. ಇದನ್ನು ಆಧುನಿಕ ಪ್ರಪಂಚಕ್ಕೆ ಪರಂಪರೆಯ ಜ್ಞಾನವನ್ನು ದಾಟಿಸುವ ತಾಯ್ತನವಾಗಿ ಕಾಣಬೇಕೆಂಬುದು ಒಂದು ವಿಧಾನ. ಮಲೆನಾಡ ಗಿಡ್ಡದನದ ಹಾಲು ತುಪ್ಪದ ಬಣ್ಣ, ಹೆಂಟೆಗದ್ದೆಯ ಅಡಿಯಲ್ಲಿ ಮಣ್ಣಿನ ತೇವ ಗುಣವು ಅಡಗಿಸಿಕೊಳ್ಳುವ ಮಣ್ಣೆಂಬ ತಂತ್ರ ವಿಧಾನ, ಅಡವಿಗುಡ್ಡವು ಮಳೆ ನೀರು ಬಸಿದು ಹಳ್ಳಕೊಳ್ಳಗಳಿಗೆ ಇಳಿಸುವ ವಿಧಾನ ಈ ಎಲ್ಲವೂ ರೈತ ಪರಿಸರದೊಳಗೆ ಹೊಂದಿ ಬಾಳುವ ರೀತಿ. ಅದನ್ನು ಕಾಪಾಡಿಕೊಳ್ಳುವುದು ಮನುಷ್ಯನ ಕರ್ತವ್ಯ. ಇದನ್ನು ಪ್ರಾಣಿಪಕ್ಷಿ, ಅಡವಿ, ಮನುಷ್ಯರೆಲ್ಲ ಒಟ್ಟಿಗೆ ವಾಸ ಮಾಡುವ 'ಸೋದರ ಸ್ನೇಹ' ಸಂಬಂಧವೆಂದು ಕಾಳಿದಾಸ ಹೇಳುತ್ತಾನೆ. ದಿನಾ ಒಂದು ಕೋಟಿ ಮರಣ ಈ ದೇಶದಲ್ಲಿ ಆಗುತ್ತದೆಂದು ಇಟ್ಟುಕೊಂಡರೆ ಪ್ರತಿ ಮರಣಕ್ಕೆ 3 ಕ್ವಿಂಟಾಲ್ ಸೌದೆಯಾದರೂ ಬೇಕಲ್ಲವೇ? ಈ ಸಂದರ್ಭದ ತಿಳಿವು ಮನುಷ್ಯನಿಗಿರಬೇಕು. ಭೂಮಿಯೊಳಗೆ ಹೂಳುವ ಶವಸಂಸ್ಕಾರ ರೀತಿ ಭೂಮಿ, ನೀರು ಹಾಗೂ ಮನುಷ್ಯನನ್ನು ಬೆಸೆಯುವ ವಿಧಾನವೆಂದು ತಿಳಿಯಬೇಕು. ಆದರೆ, ಈ ಆಧುನಿಕ ಯುಗದಲ್ಲಿ ಹೂಳುವ ಪದ್ಧತಿಯು ಮಾಯವಾಗಿದೆ, ಯಂತ್ರಗಳ ಬಾಯಲ್ಲಿ ಶವವನ್ನು ಕೊಡುವ ಪದ್ಧತಿ ಇಂದಿನ ಆಧುನಿಕ ಯುಗದಲ್ಲಿದೆ. ಗೇದುಣ್ಣುವವನು ಬದುಕುತ್ತಾನಲ್ಲವೇ!. ಗಾಂಧಿ ಇದನ್ನೇ ಹೇಳುತ್ತಾರೆ, ಮನುಷ್ಯನ ಕೈಕಾಲುಗಳಿಗೆ ಕೆಲಸ ಕೊಡಿ, ಅವನ ಜೀವನ ಅವನು ಸಾಗಿಸುತ್ತಾನೆ. ಹಳ್ಳಿಯಲ್ಲಿನ ಸೋಮವಾರ ಕೆಲಸ, ವಾರ ಕೆಲಸ, ಮುಯ್ಯಿ ಆಳು ಕೆಲಸ ಇವೆಲ್ಲ ದೇವರ ಕೆಲಸ. ಆಧುನಿಕ ಬದುಕಿಗೆ ಇಂತಹವು ಮಾದರಿಗಳು. ಈಗಿನ ಸರ್ಕಾರಿ ಮಾದರಿಗಳು ಸೋಮಾರಿತನದ ಹಾಸಿಗೆಗಳು.

ದೇವರು ಎಲ್ಲೂ ಇಲ್ಲ, ಕಾಯಕದಲ್ಲಿದ್ದಾನೆ. ಅವನು 'ಹೂವಿನಾಗೆ ಹುದುಗ್ಯಾನ, ಮಾಲೆಯಾಗೆ ಮಲಗ್ಯಾನ, ಮೊಗ್ಗಾಗೆ ಕಣ್ಣತೆರೆದಾನ' ಎಂಬುದು ಪರಂಪರೆಯ ತಿಳಿವು. ಹೀಗೆ ಪರಂಪರೆ ಜ್ಞಾನ ಎಂಬುದು ತಿಳಿವಿನ ಜ್ಞಾನ. ಅರಿವಿಲ್ಲದ ಆಧುನಿಕತೆ ಎಂಬುದು ಮರೆವಿನ ಧ್ಯಾನ. ಅದು ಅರಿವಿನ ಕಡೆ ಚಲಿಸಬೇಕು. ಇದೇ ರೀತಿ ಅಂದು ನಮ್ಮ ಹಿರಿಯರು ಮದುವೆ ಇಟ್ಟು ವಿಳೇಶಾಸ್ತ್ರ ಮಾಡಿ ಮುಗಿಸಿ ಲಗ್ನಪತ್ರಿಕೆ ಬರೆಸಲು ಹೋಗುತ್ತಿದ್ದರು. ಇಂದು ಹೆಸರು ಬಲ ಕೂಡಿದರೆ, ಜಾತಕ ಬಂದರೆ ಮಾತ್ರ ಮದುವೆ ಎಂಬ ಅಪತಿಳುವಳಿಕೆ ಆವರಿಸಿಬಿಟ್ಟಿದೆ. ಇದು ಪರಂಪರೆಯ ಜ್ಞಾನವನ್ನು ಹತ್ತಿಕ್ಕುವ

ರೀತಿ. ಕುವೆಂಪು ಪ್ರಾರಂಭಿಸಿದ ಮಂತ್ರ ಮಾಂಗಲ್ಯ; ಆಗಿನ ಹಳ್ಳಿಗಳಲ್ಲಿನ ಮನೆಮುಂದಿನ ಸರಳ ಮದುವೆಗಳು ಇವೆಲ್ಲ ಆಡಂಬರಕ್ಕೆ ದಾಟಿವೆ. ಕಲ್ಯಾಣ ಮಂದಿರಗಳು ಬೆಳೆದಂತೆಲ್ಲಾ ರೈತರ ನೇಣುಹಗ್ಗಗಳು ಉದ್ದವಾಗಿವೆ. ಕುವೆಂಪು ಉದಯವಾಣಿ ಪತ್ರಿಕಾ ಸಂದರ್ಶನವೊಂದರಲ್ಲಿ ಹೇಳಿದ್ದರು: ನೀವು ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಆದರೆ ಅದರಲ್ಲಿರುವ ಮೌಢ್ಯ, ಅನಾಚಾರಗಳನ್ನು ಹೇಳದೆ ಇರಬೇಡಿ ಎಂದು. ಇದರರ್ಥ, ಜನಪದ ಪರಂಪರೆಯೊಳಗಿನದೆಲ್ಲ, ಅದರೊಳಗಿನ ಸಾಹಿತ್ಯ ವಿಸ್ತಾರಗಳೆಲ್ಲ ಜ್ಞಾನಗಳಲ್ಲ. ಅದರಲ್ಲಿ ಈ ದೇಶದ ವರ್ಣಚರಿತ್ರೆ, ವರ್ಗಚರಿತ್ರೆ, ಅವಮಾನ ಚರಿತ್ರೆಗಳೆಲ್ಲವೂ ಇವೆ. ಸಮಾನತೆಯ ಕಡೆಯ ನಡಿಗೆಯೇ ಆಧುನಿಕ ಜೀವನದ ಧ್ಯೇಯ ಆಗಬೇಕು, ಇಂತಹವು ಅವಶ್ಯಕತೆಗಳಾಗಿ ನಿಲ್ಲಬೇಕು.

ಸಮಕಾಲೀನ ಜೀವನ ಮೌಲ್ಯಗಳು ಕಾಲಕಾಲಕ್ಕೆ ಬದಲಾಗುತ್ತದೆ, ಆದರೆ ಸರ್ವಕಾಲಿಕ ಜೀವನ ಮೌಲ್ಯಗಳು ಮನುಕುಲದ ಆದರ್ಶಗಳಾಗುತ್ತವೆ. ದುಡಿಯುವ ವರ್ಗದ ಜನರಿಗೆ ತಮ್ಮ ಬದುಕಿನ ಅನುಭವಗಳು ಅವರಿಗೆ ಆದರ್ಶವಾಗಿರುತ್ತದೆ. ರಾಗಿ ಬೀಸುವ ಹಾಡು, ಬುತ್ತಿ ಕಟ್ಟುವಾಗ ಹೇಳಿದ ಹಾಡು, ಭತ್ತ ಕುಟ್ಟುವಾಗ ಹಾಡಿದ ಹಾಡು, ತೊಟ್ಟಿಲು ತೂಗುವಾಗ ಹೇಳುವ ಲಾಲಿ ಹಾಡು, ಸಮಾರಂಭಗಳಲ್ಲಿ ಹೇಳುವ ಹಾಡುಗಳು, ಗೀಗಿ ಪದ ಎಲ್ಲವೂ ಕೂಡ ಅವರವರ ಅನುಭವದ ಬುತ್ತಿಗಳಾಗಿರುತ್ತವೆ. ನಾವು ಮಾಡುವ ಪ್ರತಿಯೊಂದು ಕೆಲಸದಲ್ಲೂ ಜನಪದದ ಹಿನ್ನೆಲೆ ಇರುತ್ತದೆ. ಆದರೆ ಈ ಆಧುನಿಕ ಯುಗದ ನಿರಂತರ ಕೆಲಸದ ಭರಾಟೆಯಲ್ಲಿ ಇಂತಹ ಸಂಸ್ಕೃತಿಗಳು ಮಾಯವಾಗುತ್ತಿರುವುದು ವಿಪರ್ಯಾಸ.

ಬಹುತೇಕ ಜನಪದ ಆಚರಣೆಗಳಲ್ಲಿ ಇಂದು ಧಾರ್ಮಿಕ ಅಂಶ ಮರೆಯಾಗಿ ಅವು ಕೇವಲ ಜನಪದ ಆಚರಣೆಗಳಾಗಿ ಮಾತ್ರ ಉಳಿದುಕೊಂಡಿವೆ. ವೀರಗಾಸೆ, ಪಟದ ಕುಣಿತ, ಸೋಮನ ಕುಣಿತಗಳು ಧಾರ್ಮಿಕ ಅಂಶಗಳಿಗಿಂತ ಹೆಚ್ಚು ಪಾಲು ಜನಪದ ಆಚರಣೆಗಳಾಗಿ ಪ್ರಚಾರ ಪಡೆಯುತ್ತಿವೆ. ಊರಿನ ಜಾತ್ರೆ, ಹಬ್ಬ, ಮೆರವಣಿಗೆಗೆ ಮೀಸಲಾಗಿದ್ದ ಈ ಆಚರಣೆಗಳು ಈಗ ವೇದಿಕೆಯ ಮೇಲೆ ಪ್ರದರ್ಶನ ಕಾಣುವ ಜನಪದ ಪ್ರದರ್ಶನ ಕಲೆಗಳಾಗಿ ಪರಿವರ್ತನೆ ಹೊಂದಿವೆ. ಇನ್ನು ಕೆಲವು ಆಚರಣೆಗಳು ಧಾರ್ಮಿಕ ಅಂಶಗಳಿಂದಾಗಿಯೇ ಇನ್ನೂ ಜೀವಂತವಾಗಿವೆ. ಘಟ್ಟದ ಕೆಳಗಿನ ಭೂತದ ಕೋಲ, ನಾಗಮಂಡಲದಂತಹ ಆಚರಣೆಗಳು, ಹಳೇ ಮೈಸೂರು ಭಾಗದಲ್ಲಿ ಹರಿಸೇವೆ, ಮಾರಿ ಹಬ್ಬ, ಸಿಡಿ ಸೇವೆ ಮೊದಲಾದ ಆಚರಣೆಗಳು ಧಾರ್ಮಿಕ ನಂಬಿಕೆಯ ಕಾರಣದಿಂದಲೇ ಇಂದಿಗೂ ಉಳಿದುಕೊಂಡಿವೆ. ಜನರಲ್ಲಿ ಧಾರ್ಮಿಕ ನಂಬಿಕೆ ಕಡಿಮೆಯಾಗುತ್ತಾ ಬಂದಂತೆ ಈ ಆಚರಣೆಗಳೂ ಪ್ರದರ್ಶನ ಕಲೆಗಳಾಗಿ ಬದಲಾಗಬೇಕಾಗುತ್ತದೆ, ಇಲ್ಲವೇ ಅವು ಅಸ್ತಿತ್ವ ಕಳೆದುಕೊಳ್ಳುವುದು ಅನಿವಾರ್ಯ. ಜನಪದ ಕಲೆಗಳು ಹೊಸ ಕಾಲಕ್ಕೆ ತಕ್ಕಂತೆ ಬದಲಾಗುತ್ತಿವೆ. 'ತಿಂಗಳು

ಮಾವನ ಪೂಜೆ' ಮಾಡಿ ಕೋಲಾಟವಾಡುತ್ತಿದ್ದ ಹಳ್ಳಿಗಳು ಇಂದು ಅಪರೂಪವಾಗಿವೆ.

ಜನಪದ ಆಚರಣೆ, ಕಲೆಗಳ ಬಗ್ಗೆ ನಗರಗಳ ಒಂದು ವರ್ಗಕ್ಕೆ ಕುತೂಹಲ, ಆಕರ್ಷಣೆಗಳು ಹೆಚ್ಚುತ್ತಿವೆ. ವಿದೇಶಗಳಲ್ಲಿ ಈ ಕಲೆಗಳನ್ನು ಪ್ರಚುರಪಡಿಸಬೇಕೆಂಬ ಉತ್ಸಾಹ ಈ ವರ್ಗಕ್ಕಿದೆ. ಆದರೆ, ಜನಪದರಿಗೆ ತಮ್ಮ ಕಲೆಗಳ ಬಗ್ಗೆ ಒಲವು ಕಡಿಮೆಯಾಗುತ್ತಿದೆ. ಶಾಸ್ತ್ರೀಯ ಸಂಗೀತದ ಕಲಾವಿದನೊಬ್ಬ ಅದನ್ನೇ ಉದ್ಯೋಗವಾಗಿ ಮಾಡಿಕೊಳ್ಳುವಂತೆ ಜನಪದ ಕಲಾವಿದ ತನ್ನ ಕಲೆಯನ್ನೇ ನೆಚ್ಚಿಕೊಂಡು ಬದುಕಲು ಸಾಧ್ಯವಿಲ್ಲ. ಹವ್ಯಾಸವಾಗಿಯಷ್ಟೇ ಜನಪದ ಕಲೆಗಳು ಕಲಾವಿದರಲ್ಲಿ ಉಳಿದುಕೊಂಡಿವೆ. ದಸರಾ, ಜಾನಪದ ಹಬ್ಬ, ಊರ ಮೆರವಣಿಗೆಗಳಲ್ಲಿ ಸಿಗುವ ಕೆಲವು ಸಾವಿರ ರೂಪಾಯಿಗಳನ್ನು ನೆಚ್ಚಿಕೊಂಡು ಜನಪದ ಕಲಾವಿದರು ಬದುಕು ನಡೆಸುವುದು ಈ ಆಧುನಿಕ ಯುಗದಲ್ಲಿ ಸಾಧ್ಯವಿಲ್ಲ.

ಜನಪದರಿಗೆ ತಮ್ಮ ಕಲೆಗಳ ಬಗ್ಗೆ ಒಲವು ಕಡಿಮೆಯಾಗುತ್ತಾ ಬಂದಂತೆ ಪ್ರದರ್ಶನದ ಅವಧಿ, ಪ್ರದರ್ಶನದ ರೂಪಗಳೂ ಬದಲಾಗುತ್ತಿವೆ. ವಾರಗಟ್ಟಲೆ, ರಾತ್ರಿ ಇಡೀ ಹಾಡುತ್ತಿದ್ದ ಜನಪದ ಮಹಾಕಾವ್ಯಗಳು ಗಂಟೆಗಳ ಅವಧಿಗೆ ಸೀಮಿತವಾಗಿವೆ. 'ತತ್ತೋಂ ತದಿಗಿಣ ತೈ ತದಿಗಿಣ ತಾಂ ತದಿಗಿಣ ತೋಂ' ಮಟ್ಟಿಗೆ ಮುಂಗಾಲ ಮೇಲಿಂದ ಚಿಮ್ಮಿ ಕುಣಿಯುತ್ತಿದ್ದ ಮೂಡಲಪಾಯದ ಕಲಾವಿದರು ಈಗ ಇಲ್ಲವಾಗಿದ್ದಾರೆ. ಸಂತೆ, ಜಾತ್ರೆಗಳಲ್ಲಿ ಸಾಮಾನ್ಯವಾಗಿ ಕಾಣುತ್ತಿದ್ದ ಜುಂಜಪ್ಪಗಳು ಕಾಣೆಯಾಗಿದ್ದಾರೆ. ಮನೆ ಮನೆಗೆ ಹಾಡಿಕೊಂಡು ಭಿಕ್ಷೆಗೆ ಬರುತ್ತಿದ್ದ ದೊಂಬಿದಾಸರು ಈ ರೂಢಿ ಬಿಟ್ಟು ಬಹಳ ಕಾಲವಾಗಿದೆ. ಕರಗ, ಜಾತ್ರೆ, ಉತ್ಸವಗಳು ಧಾರ್ಮಿಕ ನಂಬಿಕೆಯ ಕಾರಣದಿಂದಾಗಿ ಮಾತ್ರ ಅಲ್ಲಲ್ಲಿ ನಡೆಯುತ್ತಿವೆ. ಆದರೆ, ಧಾರ್ಮಿಕ ನಂಬಿಕೆಯ ಹೆಸರಲ್ಲಿ ಮೂಢನಂಬಿಕೆಯೂ ಜೀವಂತವಾಗಿ ಉಳಿದುಕೊಳ್ಳುವ ಅಪಾಯವೂ ಇದೆ.

ಈ ಆಧುನಿಕ ಯುಗದ ಪಾರಂಪರಿಕ ಜ್ಞಾನ 'ಹಿತ್ತಲ ಗಿಡ ಮದ್ದಲ್ಲ' ಎಂದು ಮೂಗು ಮುರಿಯುತ್ತಿದ್ದ ಕಾಲವೊಂದಿತ್ತು. ಆದರೆ, ಈಗ ನಮ್ಮ ಹಿತ್ತಲಿನ ಮದ್ದನ್ನೇ ನಮಗೆ ಮಾರುವ ಜಾಗತಿಕ ಮಾರುಕಟ್ಟೆ ಸೃಷ್ಟಿಯಾಗಿದೆ. ಉಪ್ಪುಲವಂಗದ ರಸ ಮುಕ್ಕಳಿಸಿದರೆ ಬಾಯಿಯ ಸಮಸ್ಯೆಗಳು ದೂರಾಗುತ್ತವೆ ಎಂಬ ಪಾರಂಪರಿಕ ಜ್ಞಾನವೇ ಈಗ ದೊಡ್ಡ ಟೂತ್‌ಪೇಸ್ಟ್ ಕಂಪೆನಿಯೊಂದರ ಮಾರಾಟದ ಜಾಹೀರಾತು ಶಕ್ತಿಯಾಗಿದೆ. ಇದ್ದಿಲಿನ ಶಕ್ತಿ ಎಂಥದ್ದು ಎಂಬುದು ಟೂತ್‌ಬ್ರೆಶ್ ಕಂಪನಿಯೊಂದಕ್ಕೆ ಈಗ ಗೊತ್ತಾಗಿದೆ. ಬೇವಿನ ಎಲೆಯ ರಸದಿಂದ ಹೇನುಗಳು ಕಡಿಮೆಯಾಗುತ್ತವೆ ಎಂಬುದನ್ನು ಶಾಂಪೂ ಕಂಪೆನಿಯೊಂದು ಈಗ 'ಸಂಶೋಧನೆ' ನಡೆಸಿ ಪ್ರಚಾರಕ್ಕೆ ತರುತ್ತಿದೆ! ಹುಳಿಯಿಂದ ಪಾತ್ರೆಗಳು ಬೆಳ್ಳಗಾಗುತ್ತವೆ ಎಂಬುದು ಜನಪದರ ಕಲ್ಪನೆ.

ಆದರೆ, ಆಧುನಿಕತೆಯಲ್ಲಿ ಪಾತ್ರೆ ತೊಳೆಯುವ ವಿಮ್ ಬಾರ್‌ನ ಕಂಪೆನಿಯೊಂದು 'ಕಂಡುಹಿಡಿದಿದೆ'. ಇವು ಒಂದಿಷ್ಟು ಉದಾಹರಣೆಗಳು ಮಾತ್ರ. ಪಾರಂಪರಿಕ ಜ್ಞಾನವನ್ನು ತಮ್ಮ ಮಾರುಕಟ್ಟೆಯ ಸರಕಾಗಿಸಿಕೊಂಡಿರುವ ಕಂಪನಿಗಳು ಈಗ 'ತಾವು ಶೋಧಿಸಿದ ಜ್ಞಾನ'ಕ್ಕೆ ಪೇಟೆಂಟ್ ಪಡೆದುಕೊಳ್ಳುತ್ತಿವೆ. ಪಾರಂಪರಿಕ ವೈದ್ಯ ಪದ್ಧತಿ, ನಾಟಿ ಮದ್ದಿನ ಜ್ಞಾನದ ಶಕ್ತಿಯ ಬಗ್ಗೆ ಗೊತ್ತಾದ ಅಂತರರಾಷ್ಟ್ರೀಯ ಸಂಸ್ಥೆಗಳು ಪಾರಂಪರಿಕ ವೈದ್ಯ ಪದ್ಧತಿಯ ದೊಡ್ಡ ದೊಡ್ಡ ಆಸ್ಪತ್ರೆಗಳನ್ನು ಸ್ಥಾಪಿಸುತ್ತಿವೆ. ಹಳ್ಳಿಯ ಹೊಲ, ಗದ್ದೆಗಳಿಂದ ಆರಿಸಿ ತಂದ ಗಿಡಮೂಲಿಕೆಗಳಿಗೆ ಲಕ್ಷಾಂತರ ರೂಪಾಯಿ ಬಿಲ್ ಮಾಡುವ ಇಂತಹ ಆಸ್ಪತ್ರೆಗಳಿಗೆ ನಮ್ಮ ಜನರೇ ದುಡ್ಡು ಕಟ್ಟುತ್ತಿದ್ದಾರೆ.

ನವ ಮಾಧ್ಯಮಗಳ ಮೂಲಕ ಜನಪದ ಕಲೆ, ಆಚರಣೆ, ಜ್ಞಾನದ ಪ್ರಸಾರಕ್ಕೆ ಸಾಕಷ್ಟು ಅವಕಾಶಗಳಿವೆ. ಜನಪದ ಆಚರಣೆ, ಕಲಾಪ್ರದರ್ಶನಗಳನ್ನು ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡುವ ಮೂಲಕ ಅದನ್ನು ಲಕ್ಷಾಂತರ ಜನ ವೀಕ್ಷಿಸುವಂತೆ ಮಾಡಬಹುದು. ಅದರ ಲಿಂಕ್ ಅನ್ನು ಫೇಸ್‌ಬುಕ್, ಟ್ವಿಟರ್, ಗೂಗಲ್, ವಾಟ್ಸ್‌ಆಪ್ ಮೂಲಕ ಹರಿಯಬಿಟ್ಟರೆ ಅದು ಇನ್ನಷ್ಟು ಜನರನ್ನು ಸೆಳೆದುಕೊಳ್ಳುತ್ತದೆ. ಜನಪದ ಕಲೆಗಳ ಬಗ್ಗೆ ಫೇಸ್‌ಬುಕ್, ಬ್ಲಾಗ್‌ಗಳಲ್ಲಿ ಚರ್ಚಿಸಬಹುದು. 'ನವ ಜಾನಪದ'ಕ್ಕೆ ಇರುವ ಸಾಧ್ಯತೆಗಳ ಬಗ್ಗೆ ಸಂವಾದಕ್ಕೆ ನವ ಮಾಧ್ಯಮಗಳಿಗಿಂತ ಉತ್ತಮ ವೇದಿಕೆ ಸಿಗಲಾರದು.

ಜನಪದ ಆಚರಣೆ, ಕಲೆಗಳ ಸಂವಹನದ ಸಾಧ್ಯತೆಗಳನ್ನು ಹುಡುಕುವ ಮಾರ್ಗದ ಸಾಧ್ಯತೆಯಾದ 'ಸಂವಹನ ಜಾನಪದ' ಅಧ್ಯಯನ ಶಿಸ್ತು ಸಂಶೋಧನಾ ನೆಲೆಯಿಂದ ಮಹತ್ವದ್ದು. ಈ ನಿಟ್ಟಿನಲ್ಲಿ ನವ ಮಾಧ್ಯಮಗಳನ್ನು ಜನಪದ ಕಲಾವಿದರೂ ಬಳಸುವ ಬಗ್ಗೆ ತರಬೇತಿ ನೀಡುವುದು, ತಂತ್ರಜ್ಞಾನವನ್ನು ಅವರ ಅಂಗೈಗೂ ದಾಟಿಸುವುದು ಮುಖ್ಯ. ಇದು ಇಂದಿಗೆ ಕನಸಾದರೂ ಇಂತಹ ಕನಸುಗಳನ್ನು ಕಾಣುವುದೂ ಈಗ ಮುಖ್ಯವಾಗುತ್ತದೆ. ಜಾನಪದದ ಜೀವಂತಿಕೆ ಎಂದರೆ ಜನಪದ ಕಾವ್ಯ, ಕಲೆ, ಆಚರಣೆಗಳ ಸಂಗ್ರಹ, ದಾಖಲೀಕರಣ ಮಾತ್ರವಲ್ಲ. ಅದರ ಜತೆಗೆ ಪ್ರಸ್ತುತ ಹಾಗೂ ಭವಿಷ್ಯದಲ್ಲಿ ಜಾನಪದ ಹಾಗೂ ಜನಪದ ಕಲಾವಿದರನ್ನು ಹೇಗೆ ಉಳಿಸಿಕೊಳ್ಳಬೇಕೆಂಬುದೂ ಮುಖ್ಯ. ಈ ನಿಟ್ಟಿನಲ್ಲಿ ಸಂಶೋಧಕರು, ಕಲಾವಿದರು, ವಿದ್ವಾಂಸರು ಭಿನ್ನಭೇದವಿಲ್ಲದೆ ಒಟ್ಟಿಗೆ ಕೆಲಸ ಮಾಡುವುದು ಅಗತ್ಯ. ಜನಪದ ಕಲಾವಿದ ಉಳಿಯದೆ ನಮ್ಮ ಜಾನಪದ ಉಳಿಯಲಾರದು ಎಂಬ ಅರಿವು ಸರ್ಕಾರದಲ್ಲಿರುವವರೂ ಸೇರಿದಂತೆ ಎಲ್ಲರಿಗೂ ಮೂಡಬೇಕು. ವಿಶ್ವವಿದ್ಯಾಲಯ, ಅಕಾಡೆಮಿಗಳು ಜನಪದರ ಜಗಲಿಗೆ ಹತ್ತಿರವಾಗಬೇಕು. ಕೇವಲ ಸಂಶೋಧನೆ, ದಾಖಲೆ, ಮುದ್ರಣದ ಕಾರ್ಯಕ್ಕೆ ಮಾತ್ರ ಸೀಮಿತವಾದ ಕ್ಷೇತ್ರ ನಮ್ಮ ಜಾನಪದ ಆಗಬಾರದು.

ಒಟ್ಟಾರೆಯಾಗಿ ಹೇಳುವುದಾದರೆ ಇಂದಿನ ಈ ಆಧುನಿಕ ಯುಗದಲ್ಲಿ ಜನಪದ ಕಲೆಗಳು, ಆಚರಣೆ, ನಂಬಿಕೆಗಳು ಇಂದಿನ ತಂತ್ರಜ್ಞಾನ ಯುಗದಲ್ಲಿ ಇವೆಲ್ಲ ನಶಿಸಿ ಹೋಗುತ್ತಿರುವುದು ದೂರದೃಷ್ಟಿಯ ಸಂಗತಿ. ಆದ್ದರಿಂದ ಇಂದಿನ ಯುವಪಿಳಿಗೆ ಮೇಲೆ ದೊಡ್ಡ ಜವಾಬ್ದಾರಿ ಏನೆಂದರೆ, ಪ್ರಾಚೀನ ಜನಪದ ಕಲೆಗಳನ್ನು ಉಳಿಸಿ ಬೆಳೆಸಲು ನಾವು ಎಲ್ಲರೂ ಕೈ ಜೋಡಿಸಿ ಕಂಕಣಬದ್ಧರಾಗಿ ದುಡಿಯಬೇಕು. ಅಂದಾಗ ಮಾತ್ರ ಈ ಕಲೆಗಳನ್ನು ಉಳಿಸಲು ಸಾಧ್ಯ. ಹಾಗೂ ತಂತ್ರಜ್ಞಾನವನ್ನೇ ಬಳಸಿ ಈ ಕಲೆಗಳನ್ನು ಬೆಳೆಸುವ ಸಾಧ್ಯತೆ ಇದೆ. ಈ ನಿಟ್ಟಿನಲ್ಲಿ ನಾವು ಕೆಲಸ ಮಾಡಬಹುದಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಭಜಂತ್ರಿ ಬಿ.ಎಸ್. (ಸಂ), (2021), ಜನಪದ ಸಾಹಿತ್ಯ ಮತ್ತು ಜನಪದ ಗಣಿತ, ಪ್ರಸಾರಾಂಗ, ಕ.ವಿ.ವಿ., ಧಾರವಾಡ.
2. ನಲ್ಲೂರ ಪ್ರಸಾದ (ಸಂ), (1992), ನವೋದಯ ಸಾಹಿತ್ಯ ಮತ್ತು ಜನಪದ, ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು.
3. ನಾಗಭೂಷಣ ಬಗ್ಗನಡು (ಸಂ), (2014), ಆಧುನಿಕ ಜನಪದ, ಶ್ರೀ ಅನ್ನಪೂರ್ಣ ಪ್ರಕಾಶಕರು, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.